(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ:– ಜನರ ಭಾವನೆಗಳಿಗೆ ನಾವು ಧ್ವನಿಯಾಗಿದ್ದೆವು. ಅದು ಪ್ರತಿಪಕ್ಷದ ಕರ್ತವ್ಯವಾಗಿದೆ. ನಮ್ಮಲ್ಲಿ ಏನು ರಾಜಕಾರಣ ಇದೆ? ಈ ಹೇಳಿಕೆಯನ್ನು ಧಿಕ್ಕರಿಸಿ ನಾವೂ ಕೂಡ ಸಭಾತ್ಯಾಗ ಮಾಡುತ್ತೇವೆ. ಜನರ ಭಾವನೆಗಳಿಗೆ ಧ್ವನಿಯಾಗುವುದು ನಮ್ಮ ಕರ್ತವ್ಯ ಪ್ರತಿಪಕ್ಷ ಎಂದರೆ ರಾಜಕಾರಣ ಮಾಡುತ್ತಿದ್ದೇವೆಯೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನಿಮಗೆ CBI ಗೆ ರೆಫರ್ ಮಾಡುವುದು ಬೇಕಾಗಿರಲಿಲ್ಲ. ನಿಮಗೆ ರಾಜಕೀಯ ಬೇಕಾಗಿದೆ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಉಪ – ವಿಭಾಗಾಧಿಕಾರಿಗಳ ಕಛೇರಿ

212(4418); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿರುವ ಉಪ–ವಿಭಾಗಾಧಿಕಾರಿಗಳ ಕಛೇರಿಗಳ (ಎ.ಸಿ. ಆಫೀಸ್) ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದಲ್ಲಿ ಉಪ–ವಿಭಾಗಾಧಿಕಾರಿಗಳ ಕಛೇರಿಗಳನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಉಪ–ವಿಭಾಗಾಧಿಕಾರಿಗಳ ಕಛೇರಿಗಳನ್ನು ತೆರೆಯಲಾಗುವುದು (ವಿವರ ನೀಡುವುದು);

ಈ) ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಉಪ–ವಿಭಾಗಾಧಿಕಾರಿಗಳ ಕಛೇರಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ (ಸಂಪೂರ್ಣ ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮತ್ತು ಇ) ನಾಲ್ಕು ಪ್ರಾದೇಶಿಕ ಆಯುಕ್ತರಿಂದ ಕೋರಿಕೆಗಳು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

ಈ) ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಅಥವಾ ಮುದ್ದೇಬಿಹಾಳವನ್ನು ಕಂದಾಯ ಉಪವಿಭಾಗವೆಂದು ರಚಿಸುವುದಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರಿಂದ ಕೋರಿಕೆಯು ಸ್ವೀಕೃತವಾಗಿದ್ದು, ಉಪ ವಿಭಾಗೀಯ ಕಛೇರಿಯನ್ನು ತೆರೆಯುವ ಬಗ್ಗೆ ಚಿಂತನೆ ನಡೆಸಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4418ಗೆ ಅನುಬಂಧ

ಕ್ರ.ಸಂ.	ವಿಭಾಗ	ಜಿಲ್ಲೆಗಳು	ಉಪವಿಭಾಗಾಧಿಕಾರಿಗಳ ಕಛೇರಿಗಳ ಸಂಖ್ಯೆ
1	ಬೆಂಗಳೂರು	ಬೆಂಗಳೂರು ಗ್ರಾಮಾಂತರ	01
2		ಬೆಂಗಳೂರು ನಗರ	02
3		ದಾವಣಗೆರೆ	02
4		ಚಿತ್ರದುರ್ಗ	01
5		ರಾಮನಗರ	01
6		ಚಿಕ್ಕಬಳ್ಳಾಪುರ	01
7		ಕೋಲಾರ	01
8		ಶಿವಮೊಗ್ಗ	02
9		ತುಮಕೂರು	03

10	ಮೈಸೂರು	ಮೈಸೂರು	02
11		ಮಂಡ್ಯ	02
12		ಚಾಮರಾಜನಗರ	01
13		ಉಡುಪಿ	01
14		ಕೊಡಗು	01
15		ಹಾಸನ	02
16		ದಕ್ಷಿಣ ಕನ್ನಡ	02
17		ಚಿಕ್ಕಮಗಳೂರು	02
18	ಬೆಳಗಾವಿ	ಬೆಳಗಾವಿ	03
19		ಉತ್ತರ ಕನ್ನಡ	04
20		ವಿಜಯಪುರ	02
21		ಹಾವೇರಿ	02
22		ಬಾಗಲಕೋಟೆ	02
23		ಧಾರವಾಡ	01
24		ಗದಗ	01
25	ಕಲಬುರಗಿ	ಕಲಬುರಗಿ	02
26		ಬೀದರ್	02
27		ರಾಯಚೂರು	02
28		ಕೊಪ್ಪಳ	01
29		ಯಾದಗಿರಿ	01
30		ಬಳ್ಳಾರಿ	02
ಒಟ್ಟು			52

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ:– ಮಾನ್ಯ ಅಧ್ಯಕ್ಷರೆ ನನಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು:– ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ:– ಉತ್ತರವನ್ನು ತೆಗೆದುಕೊಂಡು ಬರುತ್ತಿದ್ದಾರೆ. ಇವತ್ತು ಗಲಾಟೆ ಆಗುತ್ತದೆ ಎನ್ನುವ ನಿರೀಕ್ಷೆಯಲ್ಲಿ ಕೆಲವು ಉತ್ತರಗಳನ್ನು ಟೇಬಲ್ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನನಗೆ ಉತ್ತರ ಬಂದಿದೆ. ನಾನು ಕೇಳಿದಂತಹ ಪ್ರಶ್ನೆಯಲ್ಲಿ ರಾಜ್ಯದಲ್ಲಿ ಇರುವ ಉಪ ವಿಭಾಗಾಧಿಕಾರಿಗಳ ಕಛೇರಿಗಳನ್ನು ಎಷ್ಟು ನಿರ್ಮಾಣ ಮಾಡುತ್ತಿದ್ದೀರಿ? ಎಂದು ಪ್ರಶ್ನೆ ಇದೆ. ಎಷ್ಟು ಕಡೆ ಮಾಡುವಂತಹ ಆಲೋಚನೆ ಸರ್ಕಾರಕ್ಕೆ ಇದೆ? ಎಂದು ಕೇಳಿದ್ದೇನೆ. ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ನಾನು ಬಿಜಾಪುರ ಜಿಲ್ಲೆ ಬಗ್ಗೆ ಮಾತನಾಡುತ್ತೇನೆ. ಬಿಜಾಪುರದಲ್ಲಿ ಒಂದು ಉಪ ವಿಭಾಗ ಕಛೇರಿ ಇದೆ. ನಂತರ ಪಕ್ಕದಲ್ಲಿಯೇ ಇಂಡಿ ತಾಲ್ಲೂಕಿನಲ್ಲಿ ಮತ್ತೊಂದು ಉಪ ವಿಭಾಗ ಕಛೇರಿ ಮಾಡಿದ್ದಾರೆ. ನಮ್ಮ ಮುದ್ದೆಬಿಹಾಳರವರಿಗೆ ಬಿಜಾಪುರ ಉಪ ವಿಭಾಗಾಧಿಕಾರಿಯವ ಕಛೇರಿ ಸುಮಾರು 100 ಕಿ.ಮಿ. ದೂರವಾಗುತ್ತದೆ. ಯಾವುದೇ ಒಂದು ಸೌಲಭ್ಯ ಬರಲಿ, ಯಾವುದೇ ಇಲಾಖೆಯ ಸೌಲಭ್ಯ ಬರಲಿ, ಉಪ ಅಧಿಕಾರಿಗಳ ಕಛೇರಿ ಮೇಲೆ ಅದು ನಿರ್ಧಾರ ಆಗುತ್ತದೆ. ಹೀಗಾಗಿ ನಾವು ವಂಚಿತರಾಗುತ್ತಿದ್ದೇವೆ.

ಅಧ್ಯಕ್ಷರು:– ತೆರೆಯುವ ಬಗ್ಗೆ ಚಿಂತನೆ ನಡೆಸಲಾಗುವುದೆಂದು ಸಚಿವರು ಹೇಳಿದ್ದಾರಲ್ರಿ,

ಶ್ರೀ ಅಪ್ಪಾಜಿ @ ಸಿ.ಎಸ್. ನಾಡಗೌಡ:– ಅವರ ಕಡೆಯಿಂದ ಉತ್ತರ ಬರಲೆಂದು ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು:– ಬೇಗ ಮಾಡಿ ಎಂದು ಹೇಳಿ.

ಶ್ರೀ ವಿ. ಶ್ರೀನಿವಾಸಪ್ರಸಾದ್:– ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವುದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಈಗ ಹೊಸ ಜಿಲ್ಲೆಗಳಾಯಿತು, ಹೊಸ ಸಬ್ ಡಿವಿಷನ್‌ಗಳಾಗಿಲ್ಲ. ಇದನ್ನು ಮಾಡಬೇಕೆಂದು ಈಗಾಗಲೇ ನಮ್ಮ

ಮನಸ್ಸಿನಲ್ಲಿದೆ. ಈಗ ಹಾಲಿ 52 ಸಬ್ ಡಿವಿಷನ್‌ಗಳಿವೆ. ನಾವು ನಾಲ್ಕೂ ರೀಜನಲ್‌ಗಳ ರೀಜನಲ್ ಕಮಿಷನರ್‌ಗಳಿಂದ ವರದಿಯನ್ನು ತರಿಸಿಕೊಂಡಿದ್ದೇವೆ. ಈಗ ಹೊಸದಾಗಿ 11 ಸಬ್ ಡಿವಿಷನ್‌ಗಳನ್ನು ಮಾಡಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ. ಅದರಲ್ಲಿರುವಂತೆ ಪ್ರತಿ ಡಿವಿಷನ್‌ದಲ್ಲಿ ಬೆಳಗಾವಿ ಡಿವಿಷನ್‌ನ ವಿಜಾಪುರದಲ್ಲಿ ಎಲ್ಲಿ ಮಾಡಬೇಕು ಎಂದು ಬಂದಾಗ, ಬಸವನ ಬಾಗೇವಾಡಿ ಮತ್ತು ಮುದ್ದೇಬಿಹಾಳ್‌ನಲ್ಲಿ ಮಾಡಬೇಕೆಂದು ಅಂದುಕೊಂಡಿದ್ದೇವೆ. ವರದಿ ಬಂದಿದೆ, ನಾವು ಹೊಸ ಸಬ್ ಡಿವಿಷನ್‌ಗಳನ್ನು ಮಾಡುವಾಗ ಖಂಡಿತ ಇದನ್ನೂ ಕೂಡ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್:– ಮಾನ್ಯ ಅಧ್ಯಕ್ಷರೆ, 11 ಸಬ್ ಡಿವಿಷನ್‌ಗಳನ್ನು ಮಾಡುತ್ತೇವೆ ಎಂದಿದ್ದಾರೆ. ಅದರಲ್ಲಿ ರಾಣೆಬೆನ್ನೂರು ಇದೆಯೋ ಇಲ್ಲವೋ? ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು:– ಆ ಪ್ರಶ್ನೆ ನೀವು ಕೇಳಿಲ್ಲಾರಿ, ಇಲ್ಲಿ ಏಕೆ ಆ ಪ್ರಶ್ನೆ ಈಗ ಬರುತ್ತದೆ?

ಶ್ರೀ ಕೆ.ಬಿ. ಕೋಳಿವಾಡ್:– 11 ಸಬ್ ಡಿವಿಷನ್‌ಗಳು ಯಾವುವು? ಎಂಬುದನ್ನಾದರೂ ಹೇಳಲಿ.

ಶ್ರೀ ವಿ. ಶ್ರೀನಿವಾಸಪ್ರಸಾದ್:– ನನ್ನ ಸಬ್ ಡಿವಿಷನ್‌ಗಳು ಉತ್ತರದಲ್ಲಿ 11 ಯಾವುವು ಎನ್ನುವುದರ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಕರ್ನಾಟಕದಲ್ಲಿ ನಾಲ್ಕು ಕಂದಾಯ ವಿಭಾಗಗಳಿವೆ. ಯಾವ ವಿಭಾಗದಲ್ಲಿ ಯಾವುದನ್ನು ಮಾಡುತ್ತೇವೆ ಎನ್ನುವುದರ ಬಗ್ಗೆ ಸಂಪೂರ್ಣ ಮಾಹಿತಿ ಇದರಲ್ಲಿದೆ. ತಾವು ನೋಡಿಕೊಳ್ಳಬಹುದು.